ದಿಂದ ಲಕ್ಷಾಂತರ ಟನ್ ಕಟ್ಟಿಗೆ ಬೇರೆ ಪ್ರಾಂತ್ಯಕ್ಕೆ ಹೋಗುತ್ತಿದೆ. ಅದನ್ನು ತಪ್ಪಿಸುವುದಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದಕ್ಕೆ ನಿಶ್ಚಿತವಾದ ಉತ್ತರವನ್ನು ಕೇಳುತ್ತೇನೆ.

ಶ್ರೀ ಬಿ.ಎ. ಜೀವಿಜಯ.—ಉರುವಲು ಕಟ್ಟಿಗೆಯು ಕರ್ನಾಟಕ ರಾಜ್ಯದಿಂದ ಹೊರ ರಾಜ್ಯಗಳಿಗೆ ಹೋಗುತ್ತಿರುವುದನ್ನು ಬ್ಯಾನ್ ಮಾಡಿದ್ದೇವೆ. ನಿಜವಾಗಿ ಹೇಳಬೇಕೆಂದರೆ ಗೋವಾ ಮತ್ತು ಮಹಾರಾಷ್ಟ್ರದಿಂದ ಉರುವಲು ಕಟ್ಟಿಗೆಯು ನಮ್ಮ ಕರ್ನಾಟಕ ರಾಜ್ಯಕ್ಕೆ ಬರುತ್ತಿದೆ.

ಶ್ರೀ ಕೆ. ರಾಮಭಟ್.—ಉರುವಲು ಕಟ್ಟಿಗೆಯನ್ನು ಒದಗಿಸುವ ಬಗ್ಗೆ ಡಿಪೋಗಳನ್ನು ತೆರೆಯಬೇಕೆಂದಿದ್ದಾರೆ, ಅದನ್ನು ಖಾಸಗೀಯವರಿಗೆ ಕೊಡುತ್ತೀರೋ ಅಥವಾ ಸಹಕಾರ ಸಂಘಗಳ ಮುಖಾಂತರ ಡಿಪೋಗಳನ್ನು ತೆರೆಯಲು ಅವಕಾಶ ಕೊಡುತ್ತೀರೋ ಎಂಬುದನ್ನು ತಿಳಿಸುತ್ತೀರಾ? ಈ ರೀತಿಯಾಗಿ ತೆರೆಯಲು ಯಾವ ನಿಯಮಗಳ ಪ್ರಕಾರ ತಾವು ಸಮ್ಮತಿ ಕೊಡುತ್ತಿದ್ದೀರಿ.

ಶ್ರೀ ಬಿ.ಎ. ಜೀವಿಜಯ.—ಈಗಾಗಲೇ ೧೬೫ ಡಿಪೋಗಳಿವೆ, ಇನ್ನು ಹೆಚ್ಚಿಗೆ ಡಿಪೋಗಳನ್ನು ಪ್ರಾರಂಭ ಮಾಡುವುದರಿಂದ ಉರುವಲು ಕಟ್ಟಿಗೆ ಪೂರೈಕೆ ಮಾಡುವುದಕ್ಕೆ ತುಂಬಾ ಕಷ್ಟವಾಗುತ್ತದೆ. ಆದರೂ ಕೂಡ ಎಲ್ಲಿ ಕಟ್ಟಿಗೆ ಸಿಗುತ್ತದೆ ಅಲ್ಲಿ ಪಂಚಾಯತಿ ಮುಖಾಂತರ ಅಥವಾ ಕೋ-ಆಪರೇಟೀವ್ ಸೊಸೈಟಿಗಳ ಮುಖಾಂತರ ಜನಗಳು ಮುಂದೆ ಬಂದರೆ ಉರುವಲು ಕಟ್ಟಿಗೆಯ ಡಿಪೋಗಳನ್ನು ತೆರೆಯುವುದಕ್ಕೆ ಪ್ರಯತ್ನ ಮಾಡಬಹುದು.

ಶ್ರೀ ಪ್ರತಾಪ ಚಂದ್ರ ಶೆಟ್ಟಿ.—ಈಗತಾನೇ ಮಂತ್ರಿಗಳು ಹೇಳಿದರು, ಒಂದು ಸಂಸಾರಕ್ಕೆ ಒಂದು ಗಾಡಿಯಲ್ಲಿ ಕಟ್ಟಿಗೆಯನ್ನು ತೆಗೆದುಕೊಳ್ಳುವುದಕ್ಕೆ ಪರವಾನೆಯನ್ನು ಕೊಟ್ಟಿದ್ದೇವೆಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜನರಿಗೆ ಈ ರೀತಿ ಕೊಟ್ಟಿದ್ದಾರೆ ಎಂಬುದನ್ನು ತಿಳಿಸುತ್ತಾರೆಯೇ, ನನಗೆ ತಿಳಿದಮಟ್ಟಿಗೆ ಯಾರಿಗೂ ಪರವಾನೆಯನ್ನು ಕೊಟ್ಟಿಲ್ಲ.

ಶ್ರೀ ಬಿ.ಎ. ಜೀವಿಜಯ.—ಅಧ್ಯಕ್ಷರೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹಳ ದಟ್ಟವಾದ ಅರಣ್ಯ ಇರುವುದರಿಂದ ೫೫ ಲಕ್ಷ ಟನ್ ಮತ್ತು ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಪರವಾನಿಗೆ ಪದ್ಧತಿ ಇದೆ. ಅದನ್ನು ರದ್ದು ಮಾಡಿದ್ದೇವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಕಟ್ಟಿಗೆಯನ್ನು ತರಲಿಕ್ಕೆ ಪರವಾನೆಯನ್ನು ಕೊಟ್ಟಿದ್ದೇವೆ.

ಶ್ರೀ ಪ್ರತಾಪ ಚಂದ್ರ ಶೆಟ್ಟಿ.—ಅಧ್ಯಕ್ಷರೇ, ನಾನು ಕೇಳುತ್ತಿರುವುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪರವಾನೆಯನ್ನು ಕೊಟ್ಟಿದ್ದಾರೆಂದು.

ಅಧ್ಯಕ್ಷರು.—ಆಗಲೇ ಉತ್ತರ ಕೊಟ್ಟಿದ್ದಾರೆ ದಯವಿಟ್ಟು ಕುಳಿತುಕೊಳ್ಳಿ.

ಬೀದರ್ ತಾಲ್ಲೂಕಿನಲ್ಲಿರುವ ಹಿಂದುಳಿದವರ ವಿದ್ಯಾರ್ಥಿ ನಿಲಯಗಳು

೪೧೨ (೧೧೩೩) ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್).—ಮಾನ್ಯ ಸಮಾಜ ಕಲ್ಯಾಣ ಮತ್ತು ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೀದರ್ ತಾಲ್ಲೂಕಿನಲ್ಲಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಇ) ೧೯೮೨-೮೩ ಹಾಗೂ ೧೯೮೩-೮೪ನೇ ಸಾಲಿನಲ್ಲಿ ಮಂಜೂರು ಮಾಡಿರುವ ವಿದ್ಯಾರ್ಥಿನಿಲಯಗಳ ಕಟ್ಟಡಗಳ ಸಂಖ್ಯೆ ಎಷ್ಟು?

ಶ್ರೀಮತಿ ಚಂದ್ರಪ್ರಭಾ ಅರಸು (ಸಮಾಜ ಕಲ್ಯಾಣ ಮತ್ತು ರೇಷ್ಮೆ ಮಂತ್ರಿಗಳು).—

ಅ) ಐದು

ಆ) ಇಲ್ಲ

ಇ) ೧೯೮೨-೮೩...ರಾಜ್ಯದಲ್ಲಿ ಒಟ್ಟು ಷಿ ಕಟ್ಟಡಗಳು (ಶಿ ಲೋಕೋಪಯೋಗಿ ಇಲಾಖೆ ಮೂಲಕ ಮತ್ತು ಷಿ ಎನ್.ಆರ್.ಇ.ಪಿ. ಮೂಲಕ)
೧೯೮೩-೮೪...ರಾಜ್ಯದಲ್ಲಿ ಒಟ್ಟು ೫೦ ಕಟ್ಟಡಗಳು ಎನ್.ಆರ್.ಇ.ಪಿ. ಮೂಲಕ

ಶ್ರೀ ನಾರಾಯಣರಾವ್ ಮಾನಪಳ್ಳಿ...ಬೀದರ್ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ ಕಟ್ಟಡಗಳು ಇವೆಯೇ ಎಂದು ಹೇಳಿದ್ದೀರಿ ರಾಜ್ಯದ ಬಗ್ಗೆ ಅಲ್ಲ.

ಶ್ರೀಮತಿ ಚಂದ್ರಪ್ರಭಾ ಅರಸ್...ಅಲ್ಲಿ ಸ್ವಂತ ಕಟ್ಟಡಗಳು ಇಲ್ಲ. ಇದುವರೆಗೆ ಐದು ಹಾಸ್ಟಲ್ ನಡೆಯುತ್ತಿರುವುದು ಬಾಡಿಗೆ ಕಟ್ಟಡದಲ್ಲಿ ಆದರೆ ಅವಶ್ಯಕತೆ ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಪ್ರತಿ ವರ್ಷ ಹೆಚ್ಚಿನ ಹೊಣಕಾಸಿನ ವ್ಯವಸ್ಥೆ ಇಲ್ಲದಿರುವುದರಿಂದ ಎನ್.ಆರ್.ಇ.ಪಿ. ಬಾಬಿನಿಂದ ಹೆಚ್ಚಿನ ಹಣವನ್ನು ಪಡೆದುಕೊಂಡು ೧೯೮೩-೮೪ರಲ್ಲಿ ಪ್ರಾರಂಭ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತಿದೆ. ೫೦ ಕೋಟಿ ರೂಪಾಯಿಗಳನ್ನು ಎನ್.ಆರ್.ಇ.ಪಿ. ಮತ್ತು ನಮ್ಮ ಇಲಾಖಾವತಿಯಿಂದ ಹಣ ವಿರ್ಚು ಮಾಡಿ ವಿದ್ಯಾರ್ಥಿನಿಲಯಗಳಿಗೆ ಕಟ್ಟಡಗಳನ್ನು ಪ್ರಾರಂಭ ಮಾಡಿ ಶಕ್ತಿಯಾದ್ದು ಸರ್ಕಾರದ ಯೋಚನೆಯಲ್ಲಿದೆ.

ಹರಿಜನ-ಗಿರಿಜನ ಅಭಿವೃದ್ಧಿಗಾಗಿ ಸಹಾಯ ಧನ ಕೊಡುತ್ತಿರುವದನ್ನು ಕುರಿತು

೪೧೩ (೧೧೨೦) ಶ್ರೀ ಕೆ. ರಾಮಭಟ್ (ಪುತ್ತೂರು)...ಮಾನ್ಯ ಸಮಾಜ ಕಲ್ಯಾಣ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯ ಸರ್ಕಾರವು ಹರಿಜನ-ಗಿರಿಜನ ಅಭಿವೃದ್ಧಿಗಾಗಿ ಹಾಕಿಕೊಂಡ ಕಾರ್ಯಕ್ರಮದಲ್ಲಿ ಗಿರಿಜನರಿಗೆ ಶೇಖಡ ೫೦ ಮತ್ತು ಹರಿಜನರಿಗೆ ಶೇಖಡ ಷಿ ೧೫ ಸಹಾಯ ಧನ ಕೊಡುತ್ತಿರುವುದು ನಿಜವೇ ?

ಆ) ಹರಿಜನರು ಗಿರಿಜನರಿಗಿಂತ ಮುಂದುವರೆದವರೆಂದು ಸರ್ಕಾರದವರು ತೀರ್ಮಾನಿಸಿರುತ್ತಾರೆಯೇ ?

ಇ) ಗಿರಿಜನರಿಗೆ ಕೊಡುವಷ್ಟೇ ಸಹಾಯ ಧನವನ್ನು ಹರಿಜನರಿಗೂ ೧೯೮೪-೮೫ರಲ್ಲಿ ಕೊಡಲಾಗುವುದೇ ?

ಶ್ರೀಮತಿ ಚಂದ್ರಪ್ರಭಾ ಅರಸು (ಸಮಾಜ ಕಲ್ಯಾಣ ಮತ್ತು ರೇಷ್ಮೆ ಮಂತ್ರಿಗಳು)...

ಅ) ನಿಜ.

ಆ) ಇಲ್ಲ.

ಇ) ಇಲ್ಲ.

ಶ್ರೀ ಕೆ. ರಾಮಭಟ್...ಮಾನ್ಯ ಅಧ್ಯಕ್ಷರೇ, ಇದರಲ್ಲಿ ಹರಿಜನರಿಗೆ, ಗಿರಿಜನರಿಗೆ ಸಬ್ಸಿಡಿ ಕೊಡುವುದರ ಬಗ್ಗೆ ಕೇಳಿದ್ದೇನೆ. ಹರಿಜನರಿಗೆ ಷಿ.೧೫ ರಷ್ಟು ಸಬ್ಸಿಡಿ ಕೊಡುತ್ತಿರುವುದು ಸ್ವಲ್ಪ ಕಡಿಮೆ ಇರಬಹುದು. ಗಿರಿಜನರಿಗೆ ಶೇಕಡ ೫೦ರಷ್ಟು ಸಬ್ಸಿಡಿ ಕೊಡುತ್ತಾರೆ. ಹರಿಜನರು ಮುಂದುವರೆದವರು, ಗಿರಿಜನರು ಹಿಂದುಳಿದವರು ಎಂದು ತಿಳಿದುಕೊಂಡು ಹೀಗೆ ಮಾಡುತ್ತಿದ್ದೀರಾ? ಇದರಲ್ಲಿ ತಾರತಮ್ಯ ಏಕೆ ಮಾಡುತ್ತೀರಿ ? ನಮ್ಮ ಜಿಲ್ಲೆಯಲ್ಲಿ ಗಿರಿಜನರು ಮುಂದುವರೆದಿದ್ದಾರೆ, ಹರಿಜನರು ಬಹಳ ಹಿಂದುಳಿದಿದ್ದಾರೆ. ಆದುದರಿಂದ ಇದನ್ನು ರಿವರ್ಸ್ ಮಾಡುವುದು ಯೋಚನೆ ಮಾಡುತ್ತೀರಾ ? ಇದರಲ್ಲಿ ಅನ್ಯಾಯವಾಗಿದೆ ಮತ್ತು ತಾರತಮ್ಯ ಉಂಟು. ಆದಕ್ಕೋಸ್ಕರ ಈ ಪ್ರಶ್ನೆಯನ್ನು ಕೇಳಿದ್ದೇನೆ. ಆದುದರಿಂದ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೀರಾ?

ಶ್ರೀಮತಿ ಚಂದ್ರಪ್ರಭಾ ಅರಸು...ಮಾನ್ಯ ಅಧ್ಯಕ್ಷರೇ, ಅವರೇ ಹೇಳಿದಹಾಗೆ, ಗಿರಿಜನರು ಅಂದರೆ ಸರ್ವೇಸಾಮಾನ್ಯವಾಗಿ, ಗುಡ್ಡಗಾಡುಗಳಲ್ಲಿ, ನಾಗರಿಕ ಸಮಾಜದ ಸಂಪರ್ಕ ಇಲ್ಲದೆ ಇರತಕ್ಕಂಥವರು, ರಸ್ತೆಗಳಿಲ್ಲ, ಸಾರಿಗೆ ವ್ಯವಸ್ಥೆ ಸೌಲಭ್ಯವಿಲ್ಲ. ಅಂತಹ ಗುಡ್ಡಗಾಡು ಪ್ರದೇಶದಲ್ಲಿ ವಾಸ ಮಾಡುತ್ತಿರುವುದರಿಂದ ಅವರಿಗೆ ಕೆಲವು ಸೌಲಭ್ಯಗಳನ್ನು ಹೆಚ್ಚು ಕೊಡಬೇಕೆಂದು ಸರ್ಕಾರ ನಿರ್ಣಯ ಮಾಡಿಕೊಟ್ಟಿದೆ. ಕೆಲವು ಭಾಗದಲ್ಲಿ ಹರಿಜನರು ಕೆಳಮಟ್ಟದಲ್ಲಿದ್ದಾರೆಂದು ಮಾನ್ಯ ಸದಸ್ಯರು